# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2633
2 ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3 ಉತ್ತರಿಸುವ ದಿನಾಂಕ : 24-03-2022
4 ಉತ್ತರಿಸುವ ಸಚಿವರು : ಗೃಹ ಸಚಿವರು

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | 2019, 2020, 2021 ರಲ್ಲಿ ನೇಮಕಾತಿ ಹೊಂದಿ ಸಿವಿಲ್, ಪಿಎಸ್ಐ ಮತ್ತು ಸಿವಿಲ್ ಕಾನ್ಸ್‌ಟೇಬಲ್ ಸಿಬ್ಬಂದಿಗಳನ್ನು ಪೊಲೀಸ್ ಇಲಾಖೆಯಲ್ಲಿ ನಾನ್ ಎಕ್ಸಿಕ್ಯೂಟಿವ್ ವಿಭಾಗಗಳಾದ ACB, LOKAYUKTHA, SCRB, CCRB, CID, CITY SB ಇತರ ಅನ್ಯ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಲಾಗಿದೆಯೇ; | ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳನ್ನು ವಿಶೇಷ ಘಟಕಗಳಿಗೆ ನಿಯೋಜಿಸಲು ಪೊಲೀಸ್ ಪ್ರಧಾನ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಿಬ್ಬಂದಿ-6/20/2006-07, ದಿನಾಂಕ: 09/06/2006 ರಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಮತ್ತು ಪರೀಕ್ಷಾರ್ಥ ಅವಧಿ ಪೂರೈಸಿರುವ ನಿಬಂಧನೆಗಳನ್ನು ಒಳಗೊಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಮಾನದಂಡಗಳನ್ನು ಪೂರೈಸದ ಅಧಿಕಾರಿ/ ಸಿಬ್ಬಂದಿಗಳನ್ನು ನಿಯೋಜಿಸಲು ಅವಕಾಶ ಇರುವುದಿಲ್ಲ.<br>ಆದಾಗ್ಯೂ ಆಡಳಿತಾತ್ಮಕ ಕಾರಣಗಳ ಹಿನ್ನಲೆಯಲ್ಲಿ ಈ ಕೆಳಗಿನಂತೆ ಕೆಲವು ವಿಶೇಷ ಘಟಕಗಳ ನಿಯೋಜನೆಗೆ ಮಾನದಂಡಗಳಲ್ಲಿ ನಿರ್ದಿಷ್ಟ ಪಡಿಸಿರುವ 5 ವರ್ಷಗಳ ಕನಿಷ್ಠ ಸೇವೆ ಮತ್ತು ಪರೀಕ್ಷಾರ್ಥ ಅವಧಿ ಇತ್ಯರ್ಥದ ನಿಬಂಧನೆಗಳಿಂದ ವಿನಾಯಿತಿ ನೀಡಲಾಗಿರುತ್ತದೆ ಇದರಿಂದಾಗಿ<br>➢ 2019, 2020, 2021 ರಲ್ಲಿ ನೇಮಕಾತಿ ಹೊಂದಿದ ಅಧಿಕಾರಿ/ಸಿಬ್ಬಂದಿಗಳನ್ನು ಪ್ರೊಬೇಷನರಿ ಅವಧಿಯಲ್ಲಿಯೇ ನಕ್ಸಲ್ ನಿಗ್ರಹ ದಳ ಮತ್ತು ಭಯೋತ್ಪಾದನಾ ನಿಗ್ರಹ ಕೇಂದ್ರ ಘಟಕಗಳಿಗೆ ಮಾತ್ರ ನಿಯೋಜಿಸಲಾಗಿರುತ್ತದೆ.<br>➢ ಅಲ್ಲದೆ ತರಬೇತಿ ಸಂಸ್ಥೆಗಳಿಗೆ ಬೋಧಕ / ಬೋಧಕೇತರ ಅವಶ್ಯಕತೆ ಇರುವುದರಿಂದ 2019 ನೇ ಸಾಲಿನ ಅಧಿಕಾರಿ/ಸಿಬ್ಬಂದಿಗಳನ್ನು ತರಬೇತಿ ಘಟಕಗಳಿಗೆ ಎರಡೂವರೆ ವರ್ಷಗಳ ಖಾಯಂ ಪೂರ್ವ ಅವಧಿ ಘೋಷಿಸಲ್ಪಟ್ಟ ನಂತರ ನಿಯೋಜಿಸಲಾಗಿರುತ್ತದೆ. |
| (ಆ) | ಅವಕಾಶ ನೀಡಿದ್ದಲ್ಲಿ, ಯಾವ ರೀತಿಯ ಮಾನದಂಡವನ್ನು ಅಳವಡಿಸಲಾಗಿದೆ? | ಪ್ರಸ್ತುತ 2019, 2020, 2021 ರಲ್ಲಿ ನೇಮಕಗೊಂಡ ಸಿಬ್ಬಂದಿಗಳಿಗೆ ನಿರ್ದಿಷ್ಟ ಅವಧಿಯ ಸೇವೆಗೆ ವಿನಾಯಿತಿ ನೀಡಿ ನಿಯೋಜನೆಗೆ ಅವಕಾಶ ಕಲ್ಪಿಸಿರುವ ಕಛೇರಿಯ ನಿರ್ದೇಶನ / ಮಾನದಂಡಗಳಿಗೆ ಸಂಬಂಧಪಟ್ಟ ತಿದ್ದುಪಡಿ ಆದೇಶ / ಸುತ್ತೋಲೆಯನ್ನು ಲಗತ್ತಿಸಿದೆ.<br>➢ ಪೊಲೀಸ್ ಪ್ರಧಾನ ಕಛೇರಿಯ ತಿದ್ದುಪಡಿ ಆದೇಶ ಸಂಖ್ಯೆ: 62/ಸಿಬ್ಬಂದಿ-3/2014-15 (ಭಾಗ-2), ದಿನಾಂಕ: 14/02/2018.<br>➢ ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ: 62/ಸಿಬ್ಬಂದಿ-3/2014-15 (ಭಾಗ-3), ದಿನಾಂಕ: 30/10/2021. |

ಸಂಖ್ಯೆ: ಒಇ 61 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು